ಅಸಲು ದಾವಾ ಸಂಖ್ಯೆ . 228 - 2009

ಡಿ .ಡಬ್ಲ್ಯೂ-1

ದಿಃ 03-01-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಸ್ವೀಕರಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ ಃ-

ನಾವು ಒಟ್ಟು 3 ಜನ ಅಣ್ಣ ತಮ್ಮಂದಿರು. ನಾನು, ಹಳದಪ್ಪ , ರಾಜಪ್ಪ. ಸಾವಿತ್ರಮ್ಮ ಮತ್ತು ರೇಣಕಮ್ಮ ಇಬ್ಬರು ಅಕ್ಕ ತಂಗಿಯರು. ಎಲ್ಲರೂ ಒಟ್ಟು ಕುಟುಂಬದ ಸದಸ್ಯರು ಎಂದರೆ ಸಾಕ್ಷಿ ಮೊದಲಿಗೆ ಕೂಡಿಕೊಂಡಿದ್ದೇವು, ನನ್ನ ತಂದೆ ತೀರಿಕೊಂಡ ನಂತರ ಎಲ್ಲರು ಬೇರೆ ಬೇರೆಯಾಗಿರುತ್ತೇವೆಂದು ನುಡಿಯುತ್ತಾರೆ. ಸುಮಾರು 30 ವರ್ಷಗಳ ಹಿಂದೆ ನಾವು ಬೇರೆ ಬೇರೆಯಾಗಿರುತ್ತೇವೆ. ನಮಗೆ ಒಬ್ಬೊಬ್ಬರಿಗೆ ಒಂದೊಂದು ಎಕರೆ ಮಾಸಡಿ ಬಳಿ ಜಮೀನು ಬಂದಿರುತ್ತದೆ. ಒಂದೊಂದು ಎಕರೆ ಜಮೀನು ಹಿಸ್ಸೆ ಮುಖಾಂತರ ಬಾಯಿ ಮಾತಿನಲ್ಲಿ ಮಾಡಿಕೊಂಡಿರುತ್ತೇವೆ. ಆದರೆ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ . ಹಾಗೆಯೇ ಹಿಸ್ಸೆ ಮಾಡಿಕೊಂಡ ಒಂದೊಂದು ಎಕರೆ ಜಮೀನಿಗೆ ಪ್ರತ್ಯೇಕವಾಗಿ ಖಾತೆ ಮಾಡಿಕೊಂಡಿರುವುದಿಲ್ಲ.

ನಾವು ಮೂವರು ಅಣ್ಣ ತಮ್ಮಂದಿರು ಒಂದೊಂದು ಎಕರೆ ಜಮೀನನ್ನು ಮೂರು ಭಾಗಗಳಾಗಿ ಮೇಲೆ, ಮಧ್ಯ, ಕೆಳಗೆ ಭಾಗ ಮಾಡಿಕೊಂಡಿದ್ದೀರಿ ಎಂದು ಸೂಚಿಸಿದರೆ ಸರಿ.ನಾವು ಬಾಯಿ ಮಾತಿನಲ್ಲಿ ಹಿಸ್ಸೆ ಮಾಡಿಕೊಂಡಿದ್ದೀವಿ ಎಂದು ಹೇಳುವ ಕಾಲಕ್ಕೆ ಮಾಸಡಿ ಗ್ರಾಮದಲ್ಲಿ ಹಳದಪ್ಪ ಮಾತ್ರ ವ್ಯವಸಾಯ ಮಾಡುತ್ತಿದ್ದ ಎಂದರೆ ಸಾಕ್ಷಿ ರಾಜಪ್ಪನವರು ಉಳುಮೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ರಾಜಪ್ಪನವರು ಬೀಡಿ ಅಂಗಡಿ ಇಟ್ಟಿದ್ದ ಎಂದರೆ ಸರಿ. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಜಮೀನಿನ ವ್ಯವಸಾಯ ಹಳದಪ್ಪನೇ ಮಾಡುತ್ತಿದ್ದ ಎಂದು ಸೂಚಿಸಿದರೆ ಸರಿಯಲ್ಲ. ನಾನು, ಹಳದಪ್ಪ , ರಾಜಪ್ಪ ರವರು ನಮ್ಮ ವೈಯಕ್ತಿಕ ಸಂಪಾದನೆಯಲ್ಲಿ ನಮ್ಮ ತಾಯಿ ಅಂದರೆ ಒಟ್ಟು ಕುಟುಂಬಕ್ಕೆ ಕೊಡುತ್ತಿದ್ದರು ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿ ಸ್ವತಃ ತಾಯಿ ನನ್ನ ಬಳಿ ಇರುತ್ತಿದ್ದರು, ಯಾರೂ ನೋಡಿಕೊಳ್ಳುತ್ತಿರಲಿಲ್ಲ ಎಂದು ನುಡಿಯುತ್ತಾರೆ.

ರಾಜಪ್ಪ ಸ್ವಲ್ಪ ಬುದ್ದಿವಂತ ಇದ್ದ ಕಾರಣ ನನ್ನ ತಾಯಿ ಎಲ್ಲಾ ಒಟ್ಟು ಕುಟುಂಬದ ವ್ಯವಹಾರ ರಾಜಪ್ಪನ ಮುಖಾಂತರವೇ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾನೇ ವ್ಯವಹಾರವನ್ನು ಮಾಡಿದ್ದೇನೆಂದು ನುಡಿಯುತ್ತಾರೆ. 5 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನೇ ಒಟ್ಟು ಕುಟುಂಬದ ವ್ಯವಹಾರ ಮಾಡುತ್ತಿದ್ದೇ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರಾಜಪ್ಪನು ಒಟ್ಟು ಕುಟುಂಬದ ಉತ್ಪನ್ನದಿಂದ ಬಂದ ಆದಾಯದಿಂದ ಹೊನ್ನಾಳಿಯಲ್ಲಿ 2 ನಿವೇಶನಗಳನ್ನು ಖರೀದಿಸಿದ್ದಾನೆಂದರೆ ಸರಿಯಲ್ಲ. ರಾಜಪ್ಪನು 1 ನಿವೇಶನವನ್ನು ಶಿವಯೋಗಿ ಮತ್ತು ಬಸವರಾಜಪ್ಪನವರಿಂದ ಒಟ್ಟು ಕುಟುಂಬದ ಆದಾಯದಿಂದ ನಿವೇಶವನ್ನು ಖರೀದಿಸಿದ್ದಾನೆಂದರೆ ಸರಿಯಲ್ಲ.

ರಾಜಪ್ಪನು 2 ನಿವೇಶನಗಳನ್ನು ಒಟ್ಟು ಕುಟುಂಬದ ಆದಾಯದಿಂದ ಬಂದಂತಹ ಹಣದಿಂದ ಖರೀದಿಸಿದ್ದಾನೆಂದು ಸೂಚಿಸಿದರೆ ಸರಿಯಲ್ಲ.

ಕಾಲಾವಕಾಶ ಕೊರಿದ್ದು , ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.